| | |
|---|---|
| Test Paper : **I** | Test Booklet Serial No. : ______________ |
| Test Subject : **GENERAL PAPER** | OMR Sheet No. : ______________ |
| Test Subject Code : **K-0015** | Roll No. [ ] [ ] [ ] [ ] [ ] [ ] [ ] [ ] |
| Test Booklet Code : **Y** | (Figures as per admission card) |

**Name & Signature of Invigilator/s**

Signature : ______________________

Name : ______________________

**Paper : I**

**Subject : GENERAL PAPER**

Time : 1 Hour 15 Minutes | Maximum Marks : 100

Number of Pages in this Booklet : **24** | Number of Questions in this Booklet : **60**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು (60) ಅರುವತ್ತು ಬಹು ಆಯ್ಕೆ ವಿಧದ ಪ್ರಶ್ನೆಗಳನ್ನೊಳಗೊಂಡಿದೆ. ಇವುಗಳಲ್ಲಿನ ಯಾವುದಾದರೂ 50 (ಐವತ್ತು) ಪ್ರಶ್ನೆಗಳನ್ನು ಅಭ್ಯರ್ಥಿಯು ಉತ್ತರಿಸಬೇಕಾಗಿದೆ. ಅಭ್ಯರ್ಥಿಯು 50 ಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಉತ್ತರಿಸಿದ ಪಕ್ಷದಲ್ಲಿ, ಅಭ್ಯರ್ಥಿಯು ಉತ್ತರಿಸಿದ ಮೊದಲ ಐವತ್ತು ಪ್ರಶ್ನೆಗಳ ಮೌಲ್ಯಮಾಪನ ಮಾಡಲಾಗುತ್ತದೆ.
3. ಪರೀಕ್ಷೆ ಪ್ರಾರಂಭವಾದಾಗ, ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ **ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.**
   i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪುಸ್ತಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರಿತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು, ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ, ಅಂಡಾಕೃತಿಯನ್ನು ಕಪ್ಪಾಗಿಸಬೇಕು.

   ಉದಾಹರಣೆ : (A) (B) ● (D)

   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು. OMR ಉತ್ತರ ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ. ಪ್ರಶ್ನೆಪುಸ್ತಿಕೆ ಒಂದರಲ್ಲಿ ಕೊಟ್ಟಿರುವ ಪುಸ್ತಿಕೆ ಸಂಕೇತವನ್ನು OMR ಹಾಳೆಯಲ್ಲಿ **ಕಡ್ಡಾಯವಾಗಿ** ನಮೂದಿಸಬೇಕು.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

## Instructions for the Candidates

1. Write your roll number in the space provided on the top of this page.
2. This paper consists of sixty(60) multiple-choice type of questions, out of which the candidate would be required to answer any fifty (50) questions. In the event of the candidate attempting more than fifty questions, the first fifty questions attempted by the candidate would be evaluated.
3. At the commencement of examination, the question booklet will be given to you. In the first 5 minutes, you are requested **to open the booklet and compulsorily examine it as below** :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the oval as indicated below on the correct response against each item.

   **Example** : (A) (B) ● (D)

   where (C) is the correct response.
5. Your responses to the questions are to be indicated in the **OMR Sheet kept inside this Booklet, which is common for both Paper I and Paper II**. If you mark at any place other than in the ovals, the OMR Answer Sheet will not be evaluated.
6. Read the instructions given in OMR carefully. Fill the Test Booklet Code of Paper – I in OMR Sheet **Compulsorily**.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space provided for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet soon after the examination.
11. **Use only Blue/Black Ball point pen.**
12. **Use of any calculator or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

## ಜನರಲ್ ಪೇಪರ್

## ಪೇಪರ್ – I

**ಗಮನಿಸಿ :** ಈ ಪತ್ರಿಕೆಯು **(60) ಅರುವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ.
ಅಭ್ಯರ್ಥಿಗಳು ಯಾವುದಾದರೂ **(50) ಐವತ್ತು** ಪ್ರಶ್ನೆಗಳನ್ನು ಮಾತ್ರ ಉತ್ತರಿಸಬೇಕು.
ಒಂದು ವೇಳೆ **(50) ಐವತ್ತು** ಪ್ರಶ್ನೆಗಳಿಗಿಂತ ಹೆಚ್ಚಿಗೆ ಪ್ರಶ್ನೆಗಳನ್ನು ಉತ್ತರಿಸಿದಲ್ಲಿ, ಮೊದಲ **(50) ಐವತ್ತು** ಪ್ರಶ್ನೆಗಳಿಗೆ ಮಾತ್ರ ಮೌಲ್ಯಮಾಪನ ಮಾಡಲಾಗುವುದು.

**1.** 'RUSA' ಯಾವುದಕ್ಕೆ ಸಂಬಂಧಿಸಿದ್ದು ?

(A) ಗ್ರಾಮೀಣ ಮತ್ತು ನಗರಾಭಿವೃದ್ಧಿ

(B) ಉನ್ನತ ಶಿಕ್ಷಣ

(C) ಸಾಮಾಜಿಕ ನ್ಯಾಯ

(D) ಗ್ರಾಮೀಣ ನೈರ್ಮಲ್ಯ

**2.** IGNOU ನಡೆಸುವ ಶೈಕ್ಷಣಿಕ ವಾಹಿನಿ

(A) ವ್ಯಾಸ

(B) ಏಕಲವ್ಯ

(C) ಜ್ಞಾನದರ್ಶನ

(D) ವಿದ್ಯಾದರ್ಶನ

**3.** ರಾಜ್ಯವೊಂದರ ರಾಜ್ಯಪಾಲರಾಗಿ ನೇಮಕಗೊಂಡ ಮೊದಲ ಮುಖ್ಯ ನ್ಯಾಯಾಧೀಶ

(A) ನ್ಯಾ|| ವೆಂಕಟಾಚಲಯ್ಯ

(B) ನ್ಯಾ|| ನಾರಾಯಣನ್

(C) ನ್ಯಾ|| ಸದಾಶಿವಂ

(D) ನ್ಯಾ|| ನಾನಾವತಿ

**4.** ಪ್ರತಿವರ್ಷ ಅಂತರರಾಷ್ಟ್ರೀಯ ಸಾಕ್ಷರತಾ ದಿನವನ್ನು ಎಂದು ಆಚರಿಸುತ್ತಾರೆ ?

(A) ಮಾರ್ಚ್ 8

(B) ಜೂನ್ 8

(C) ನವೆಂಬರ್ 8

(D) ಸೆಪ್ಟೆಂಬರ್ 8

**5.** ''ಶಿಕ್ಷಣವೆಂಬುದು ಮನುಷ್ಯನಲ್ಲಿ ಆಗಲೇ ಇರುವ ಪರಿಪೂರ್ಣತೆಯ ದೃಢೀಕರಣ'' – ಇದು ಯಾರ ಹೇಳಿಕೆ ?

(A) ಜವಾಹರ್‌ಲಾಲ್ ನೆಹರೂ

(B) ಡಾ. ಎಸ್. ರಾಧಾಕೃಷ್ಣನ್

(C) ಶ್ರೀ ಅರವಿಂದರು

(D) ಸ್ವಾಮಿ ವಿವೇಕಾನಂದ

**6.** 'ಯುನಿವರ್ಸಿಟಿ ನ್ಯೂಸ್' ಪ್ರಕಾಶಕರು

(A) ಎಂಎಚ್‌ಆರ್‌ಡಿ

(B) ಎಐಯು

(C) ಯುಜಿಸಿ

(D) ಎನ್‌ಸಿಇಆರ್‌ಟಿ

# GENERAL PAPER
## Paper – I

**Note :** This paper contains **Sixty (60)** multiple choice questions. **Each** question carrying **two (2)** marks.
Candidate is expected to answer any **Fifty (50)** questions.
In case more than **Fifty (50)** questions are attempted, only the **first Fifty (50)** questions will be evaluated.

**1.** RUSA caters to the needs of

(A) Rural and Urban Development

(B) Higher Education

(C) Social Justice

(D) Rural Sanitation

**2.** The education channel launched by IGNOU

(A) Vyas

(B) Ekalavya

(C) Jnana Darshan

(D) Vidya Darshan

**3.** The first Chief Justice to be appointed as Governor of a State

(A) Justice Venkatachalaiah

(B) Justice Narayanan

(C) Justice Sadashivam

(D) Justice Nanavathi

**4.** International Literacy Day is celebrated every year on

(A) $8^{th}$ March

(B) $8^{th}$ June

(C) $8^{th}$ November

(D) $8^{th}$ September

**5.** Who said this “Education is the manifestation of perfection already in man” ?

(A) Jawaharlal Nehru

(B) Dr. S. Radhakrishnan

(C) Sri Aurobindo

(D) Swami Vivekananda

**6.** ‘University News’ is published by

(A) MHRD

(B) AIU

(C) UGC

(D) NCERT

ಕೆಳಗಿನ ಗದ್ಯಾಂಶವನ್ನು ಗಮನವಿಟ್ಟು ಓದಿ **7 – 12** ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ :

ಇಂದಿನ ಜಗತ್ತಿನ ವಾಸ್ತವಗಳಾಗಿರುವ ಅದೆಷ್ಟೋ ವಿಷಯಗಳನ್ನು – ಸೆಲ್‌ಫೋನ್‌ನಿಂದ ಹಿಡಿದು ಟ್ಯಾಬ್ಲೆಟ್‌ವರೆಗೆ – ವಿಜ್ಞಾನ ಸಾಹಿತ್ಯ ಬಹಳ ಹಿಂದೆಯೇ ಊಹಿಸಿತ್ತು. ಚಂದ್ರನ ಮೇಲೆ ನಡೆಯುವ ಕನಸು, ಅಂಗಾಂಗ ಕಸಿ ಮತ್ತು ಬದಲಾವಣೆ, ಅಂತರಿಕ್ಷ ನೆಲೆ ಇತ್ಯಾದಿಗಳು ಒಂದು ಕಾಲಕ್ಕೆ ವಿಜ್ಞಾನ ಸಾಹಿತ್ಯದಲ್ಲಿ ರೋಚಕವಾದ ಕಾಲ್ಪನಿಕ ವಿಷಯಗಳಾಗಿದ್ದರೆ ಇಂದು ಅವು ಇತಿಹಾಸದ ಭಾಗವಾಗಿವೆ. ಭವಿಷ್ಯವಾದಿ ಬರಹಗಾರರು ಇತಿಹಾಸದ ಇಂತಹ ತಳಹದಿಯ ಮೇಲೆ ಭವಿಷ್ಯದ ದೃಷ್ಟಿ ಬೀರುತ್ತಾರೆ. ಫ್ಯೂಚರ್ ಶಾಕ್ (ಭವಿಷ್ಯದ ಆಘಾತ) ಮತ್ತು ದಿ ಥರ್ಡ್ ವೇವ್ (ಮೂರನೆಯ ಅಲೆ) ಎನ್ನುವ ಬಹುಮುಖ್ಯ ಕೃತಿಗಳ ಕರ್ತೃ ಹಾಗೂ ಪ್ರಖ್ಯಾತ ಭವಿಷ್ಯವಾದಿ ಬರಹಗಾರ ಆಲ್ವಿನ್ ಟಾಫ್ಲರ್‌ನ ಅಭಿಪ್ರಾಯದಂತೆ, ''ಬದಲಾವಣೆ ಬದುಕಿಗೆ ಬಹುಮುಖ್ಯವಷ್ಟೇ ಅಲ್ಲ, ಬದಲಾವಣೆಯೇ ಬದುಕು''.

ಇಲ್ಲಿ ನನ್ನ ಪ್ರಶ್ನೆಯೆಂದರೆ ರೇ ಕರ್ಜವೆಲ್ ಭವಿಷ್ಯವಾದಿಯೇ ? ಎಂಬುದು. ವಾಲ್ ಸ್ಟ್ರೀಟ್ ಜರ್ನಲ್ ಆತನನ್ನು ''ಒಬ್ಬ ಅವಿಶ್ರಾಂತ ಮೇಧಾವಿ'' ಎಂದು ಕರೆಯುತ್ತದೆ. ಫೋರ್ಬ್ಸ್ ಪತ್ರಿಕೆ ಆತನನ್ನು ''ಅತ್ಯುನ್ನತ ಆಲೋಚಿಸುವ ಯಂತ್ರ'' ಎಂದು ಪ್ರಶಂಸಿಸುತ್ತದೆ. ಇಂಕ್ ಮ್ಯಾಗಝೀನ್ ಪ್ರಕಾರ ಆತ ಅಮೇರಿಕಾದ 8 ಶ್ರೇಷ್ಠ ವಾಣಿಜ್ಯೋದ್ಯಮಿಗಳಲ್ಲಿ ಒಬ್ಬ. ಪಿಬಿಎಸ್ ಆತನನ್ನು ''ಅಮೇರಿಕಾದ ಇಂದಿನ ಸ್ಥಿತಿಗೆ ಕಾರಣಕರ್ತರಾದ ಹದಿನಾರು ಕ್ರಾಂತಿಕಾರರಲ್ಲಿ ಒಬ್ಬ''ನೆಂದು ಗುರುತಿಸುತ್ತದೆ. ಆತನನ್ನು ಥಾಮಸ್ ಎಡಿಸನ್‌ನ ಹಕ್ಕುಬದ್ಧ ಉತ್ತರಾಧಿಕಾರಿ ಎಂದೂ ಕರೆಯಲಾಗಿದೆ.

ಕರ್ಜವೆಲ್‌ನ ಅನ್ವೇಷಣೆಗಳು ದಂಗುಬಡಿಸುವಂಥದ್ದು ಮತ್ತು ನಮ್ಮ ದೈನಂದಿನ ಬದುಕಿನ ಮೇಲೆ ಗಾಢ ಪ್ರಭಾವ ಬೀರಿದಂತಹವುಗಳು. ಸಪಾಟಾದ ಸಿಸಿಡಿ ಬೆಡ್ ಸ್ಕ್ಯಾನರ್, ಬಹುಭಾಷಾ ಅಕ್ಷರಮಾಲೆ ಗುರುತಿಸುವ ಆಪ್ಟಿಕಲ್ ಯಂತ್ರ, ಕುರುಡರಿಗೆ ಸಹಾಯವಾಗುವಂತಹ ಮುದ್ರಿತ ಬರಹವನ್ನು ಧ್ವನಿಯಾಗಿ ಮಾರ್ಪಡಿಸುವ ಯಂತ್ರ, ಪಠ್ಯವನ್ನು ಧ್ವನಿ ಸುರುಳಿಯಾಗಿಸುವ ಸಿಂಥೆಸೈಜರ್, ಗ್ರಾಂಡ್ ಪಿಯಾನೋ ಮತ್ತು ಇತರ ಸಂಗೀತ ಉಪಕರಣಗಳ ಸ್ವರಗ್ರಾಹಿ ಸಿಂಥೆಸೈಜರ್ ಹಾಗೂ ಮೊತ್ತ ಮೊದಲ ಬಾರಿಗೆ ಮಾರುಕಟ್ಟೆಗೆ ಬಿಡುಗಡೆಗೊಳಿಸಿದ ವಿಪುಲ ಶಬ್ದಸಂಪತ್ತಿನ ಧ್ವನಿ ಸುರುಳಿ ಗುರುತಿಸುವ ಯಂತ್ರ ಇತ್ಯಾದಿಗಳು ಮುಖ್ಯವಾದವುಗಳು.

ಇಂದು ಹಲವಾರು ಜಾಲತಾಣಗಳು ಕರ್ಜವೆಲ್ ಭವಿಷ್ಯದ ಆಗುಹೋಗುಗಳ ಬಗ್ಗೆ ನಿಖರ ಮಾಹಿತಿಯಿರುವ ವ್ಯಕ್ತಿ ಎಂದು ಗುರುತಿಸುತ್ತವೆ. ಆತನ ಇತ್ತೀಚಿನ ಪುಸ್ತಕ ''ದಿ ಸಿಂಗ್ಯುಲಾರಿಟಿ ಈಸ್ ನಿಯರ್''. ಮನುಕುಲದ ಆಗು–ಹೋಗುಗಳನ್ನು ಸೂಕ್ಷ್ಮವಾಗಿ ಗ್ರಹಿಸುವ ವೃತ್ತಿಪರ ಬರಹಗಾರರಾದ ಆಲ್ವಿನ್ ಟಾಫ್ಲರ್‌ನಂತವರಿಗೂ, ತಾಂತ್ರಿಕ (ತಂತ್ರಜ್ಞಾನದಲ್ಲಿ ) ವಿಷಯಗಳಲ್ಲಿ ಅತ್ಯುನ್ನತ ಪರಿಣತಿ ಹೊಂದಿ ಭವಿಷ್ಯದ ಕುರಿತಾದ ತಮ್ಮ ಆಲೋಚನೆಗಳು ವಾಸ್ತವವಾಗಿ ಈಡೇರುವಲ್ಲಿ ಶ್ರಮಿಸುವ ಕರ್ಜವೆಲ್‌ನಂತವರಿಗೂ ನಡುವೆ ಒಂದು ಮೂಲಭೂತ ವ್ಯತ್ಯಾಸವಿದೆ. ಟಾಫ್ಲರ್ ಇತರ ಅಧ್ಯಯನಗಳು ಹಾಗೂ ಶ್ರೇಷ್ಠ ಚಿಂತಕರ ಸಂಭಾಷಣೆಗಳನ್ನು ಆಧಾರವಾಗಿಟ್ಟುಕೊಂಡು ಸಮಾಜ ಮತ್ತು ತಂತ್ರಜ್ಞಾನ ಸಾಗುವ ಭವಿಷ್ಯದ ಹೆಜ್ಜೆಗಳನ್ನು ಗುರುತಿಸಿದರೆ ಕರ್ಜವೆಲ್ ತನ್ನ ಆವಿಷ್ಕಾರಗಳ ಬೆಂಬಲದಿಂದ ''ಗೂಗಲ್''ನ ಇಂಜಿನಿಯರಿಂಗ್ ವಿಭಾಗದ ನಿರ್ದೇಶಕನಾಗುವ ಮೂಲಕ ಮನುಷ್ಯರಿಗಿಂತ ಕ್ಷಿಪ್ರವಾಗಿ ಆಲೋಚಿಸುವ ಕಂಪ್ಯೂಟರ್‌ಗಳ ತಯಾರಿಕೆಯಲ್ಲಿ ಶ್ರಮಿಸುತ್ತಿದ್ದಾನೆ. ಈ ರೀತಿ ಕೃತಕ ಬುದ್ಧಿಮತ್ತೆಯನ್ನು ಬಲಪಡಿಸಿ ಅದನ್ನು ಮಾನವ ನಿರ್ದೇಶಿತ ರೊಬೋಟ್‌ಗಳಲ್ಲಿ ಅಳವಡಿಸುವ ಮೂಲಕ ಆತ ಊಹಿಸಿದ ಏಕಾತ್ಮಕತೆಯನ್ನು ಸಾಧಿಸುವಲ್ಲಿ ಶ್ರಮಿಸುತ್ತಿದ್ದಾನೆ. ಆಲ್ವಿನ್ ಟಾಫ್ಲರ್‌ರಂತಹ ಭವಿಷ್ಯವಾದಿಗಳ ಬರಹಗಳನ್ನು ಗಮನಿಸಿದಾಗ ಮತ್ತು ಕರ್ಜವೆಲ್‌ರಂತಹವರ ಆವಿಷ್ಕಾರಗಳಲ್ಲಿ ಸಿಗುವ ಚಿತ್ರಣಗಳಲ್ಲಿ ಭವಿತವ್ಯದ ದಿನಗಳು ಹೇಗಿರುತ್ತವೆ ಎಂಬ ''ಕೊಲಾಜ್ ಚಿತ್ರ''ವನ್ನು ಕಾಣಬಹುದಾಗಿದೆ.

**7.** ಆಲ್ವಿನ್ ಟಾಫ್ಲರ್ ಯಾರು ?

(A) ಮೇಧಾವಿ (B) ಪರಿವೀಕ್ಷಣಾಕಾರ

(C) ಬರಹಗಾರ (D) ಭವಿಷ್ಯವಾದಿ

**8.** ಯಾವುದು ಕಲ್ಪನೆಯಾಗಿತ್ತೋ ಅದು ಸಾಧ್ಯವಾಗಿದೆ ?

(A) ಚಂದ್ರನ ಮೇಲೆ ಮಾನವ

(B) ಮಂಗಳ ಗ್ರಹದ ಮೇಲೆ ಮಾನವ

(C) ಗೂಗಲ್

(D) ಸಿಸಿಡಿ ಫ್ಲಾಟ್ ಬೆಡ್ ಸ್ಕ್ಯಾನರ್

Read the following passage carefully and answer the questions **7 – 12** :

Science fiction has predicted many of today's realities from cell phones to tablets. Many things that are today part of History like walking on the moon, organ transplants and space stations were once flights of fancy. Futurists build current events on a foundation of History to provide a launching pad for visions of what is to come. One of the most widely recognized Futurists is Alvin Toffler whose seminal works include Future Shock and The Third Wave. He is also the one who told us, "Change is not merely necessary to life – it is life".

Here is my question for today "Is Ray Kurzweil a Futurist ?" The Wall Street Journal has described Kurzweil as "the restless genius". Forbes calls him "the ultimate thinking machine". He has been ranked by Inc. Magazine as #8 among entrepreneurs in the United States. He has also been called "the rightful heir to Thomas Edison", while according to PBS he is one of 16 "revolutionaries who made America".

His inventions are breathtaking and they impact our lives on a daily basis. These inventions <u>include</u> the first CCD flat-bed scanner, the first omni-font optical character recognition, the first print-to-speech reading machine for the blind, the first text-to-speech synthesizer, the first music synthesizer capable of recreating the grand piano and other orchestral instruments and the first commercially marketed large-vocabulary speech recognition.

Today, many websites attribute Mr. Kurzweil with accurate predictions about where the world will be tomorrow. His latest book, The Singularity is Near. There is a fundamental difference between someone who is a professional writer and observer of humanity such as Toffler and someone who is a technological genius with almost unlimited resources who is actively working to make his predictions reality. Toffler reads studies and interviews on his way to predictions of where society and technologies will go next. Kurzweil traded in his massive private business built upon his inventions to become Google's Director of Engineering whose sole job is to make the company's computers smarter than humans. He is working every day to improve artificial intelligence and then wed that to cutting edge robotics and human interface to produce the very singularity he is predicting. Look to Futurists like Toffler who are predicting where we are headed and look to inventors like Kurzweil who are telegraphing where they are headed and a collage of futures points to the tomorrow today will become.

**7.** Who is Alvin Toffler ?

(A) Genius (B) Observer

(C) Writer (D) Futurist

**8.** What were mere imaginations that have become true ?

(A) Walking on the Moon

(B) Man landing on the Mars

(C) Google

(D) CCD Flat Bed Scanner

**9.** ಆಲ್ವಿನ್ ಟಾಫ್ಲರ್‌ನ ಉತ್ತಮ ಕೃತಿಗಳು ಯಾವುವು ?

(A) ದಿ ಸಿಂಗ್ಯೂಲ್ಲಾರಿಟಿ ಈಸ್ ನಿಯರ್

(B) ಫ್ಯೂಚರ್ ಶಾಕ್

(C) ಕರ್ಜವೆಲ್

(D) ಆರ್ಟಿಫಿಸಿಯಲ್ ಇಂಟಲಿಜೆನ್ಸ್

**10.** ಕರ್ಜವೆಲ್‌ನು ಆಲ್ವಿನ್ ಟಾಫ್ಲರ್‌ನಿಂದ ಹೇಗೆ ಭಿನ್ನ ?

(A) ನಿಖರವಾದ ಭವಿಷ್ಯವಾಣಿ

(B) ಭವಿಷ್ಯವಾದಿ ಮತ್ತು ತಂತ್ರಜ್ಞ

(C) ಶ್ರೇಷ್ಠ ತಂತ್ರಜ್ಞ

(D) ಭವಿಷ್ಯವಾದಿ

**11.** ನಮ್ಮ ನಿತ್ಯಜೀವನದ ಮೇಲೆ ಯಾವ/ಯಾರು ಪರಿಣಾಮ ಬೀರಿದೆ/ಬೀರಿದ್ದಾರೆ ?

(A) ದಿ ಥರ್ಡ್ ವೇವ್

(B) ಕರ್ಜವೆಲ್

(C) ಆಲ್ವಿನ್ ಟಾಫ್ಲರ್

(D) ಸ್ಪೀಚ್ ಸಿಂಥೆಸೈಜರ್

**12.** ಯಾವ ಕ್ಷೇತ್ರದಲ್ಲಿ ಕರ್ಜವೆಲ್‌ರವರು ಕಾರ್ಯನಿರ್ವಹಿಸುತ್ತಿದ್ದಾರೆಂದು ನಂಬಲಾಗಿತ್ತು ?

(A) ಉತ್ಕೃಷ್ಟ ಚಿಂತನ ಯಂತ್ರ

(B) ಮಾನವತೆ

(C) ಗೂಗಲ್

(D) ಕೃತಕ ಬುದ್ಧಿ

**13.** A, B ಮತ್ತು C ಕ್ರಮವಾಗಿ 36, 54 ಮತ್ತು 72 ದಿನಗಳಲ್ಲಿ ಒಂದು ಕೆಲಸ ಮಾಡಬಹುದು. ಅವರು ಕೆಲಸ ಆರಂಭಿಸಿದರು, ಆದರೆ A 8 ದಿನಗಳು ಇರುವಂತೆಯೆ ಮತ್ತು B 12 ದಿನಗಳು ಇರುವಂತೆಯೆ ಕೆಲಸವನ್ನು ಬಿಟ್ಟು ಹೊರಟು ಹೋದರು. ಈಗ C ಎಷ್ಟು ದಿನಗಳವರೆಗೆ ಕೆಲಸ ಮಾಡಿದನು ?

(A) 4 (B) 8

(C) 12 (D) 24

**14.** ಈ ಕೆಳಗಿನ ಸರಣಿಯನ್ನು ಪೂರ್ತಿಗೊಳಿಸಿ :

2, 5, 9, 19, 37, ____

(A) 76 (B) 74

(C) 75 (D) 89

**15.** 8ನೇ ಫೆಬ್ರವರಿ, 2005ರಂದು ಮಂಗಳವಾರವಾಗಿದ್ದರೆ, 8ನೇ ಫೆಬ್ರವರಿ, 2004ರಂದು ಯಾವ ವಾರದ ದಿನವಾಗಿತ್ತು ?

(A) ಭಾನುವಾರ (B) ಮಂಗಳವಾರ

(C) ಸೋಮವಾರ (D) ಬುಧವಾರ

**16.** A ವಿಧದ ಅಕ್ಕಿಯ ಬೆಲೆ ಒಂದು ಕೆ.ಜಿ.ಗೆ 25 ರೂಪಾಯಿ ಮತ್ತು B ವಿಧದ ಅಕ್ಕಿಯ ಬೆಲೆ ಒಂದು ಕೆ.ಜಿ.ಗೆ 30 ರೂಪಾಯಿ. A ಮತ್ತು B ಎರಡು ವಿಧದ ಅಕ್ಕಿಯನ್ನು 2 : 3 ಅನುಪಾತದಲ್ಲಿ ಮಿಶ್ರಣ ಮಾಡಿದರೆ, ಮಿಶ್ರ ಅಕ್ಕಿಯ ಬೆಲೆ ಎಷ್ಟಾಗಬಹುದು ?

(A) ರೂ. 29 (B) ರೂ. 28

(C) ರೂ. 27 (D) ರೂ. 26

**17.** ಒಂದು ಪಟ್ಟಣದ ಜನಸಂಖ್ಯೆ, ಮೂರು ವರ್ಷದ ಹಿಂದೆ 240000 ಇತ್ತು. ಕಳೆದ ಮೂರು ವರ್ಷಗಳಲ್ಲಿ ಕ್ರಮವಾಗಿ 3%, 2.5% ಮತ್ತು 5%ರ ಹಾಗೆ ಜಾಸ್ತಿಯಾಗಿದ್ದಲ್ಲಿ, ಈಗಿನ ಜನಸಂಖ್ಯೆ ಎಷ್ಟು ?

(A) 246051 (B) 265048

(C) 266049 (D) 269048

**9.** What are the great books of Alvin Toffler ?

(A) The Singularity is Near

(B) Future Shock

(C) Kurzweil

(D) Artificial Intelligence

**10.** How does Kurzweil differs from Alvin Toffler ?

(A) Accurate prediction

(B) Futurist and Technologist

(C) Technological genius

(D) Futurist

**11.** What or whose works have impacted our daily lives ?

(A) The Third Wave

(B) Kurzweil

(C) Alvin Toffler

(D) Speech synthesizer

**12.** Kurzweil is believed to be working on which area ?

(A) The Ultimate Thinking Machine

(B) Humanity

(C) Google

(D) Artificial Intelligence

**13.** A, B and C can do a piece of work in 36, 54 and 72 days respectively. They started the work, but A left 8 days before the completion of the work while B left 12 days before the completion. The number of days for which C worked is

(A) 4 (B) 8

(C) 12 (D) 24

**14.** Complete the series :

2, 5, 9, 19, 37, ___

(A) 76 (B) 74

(C) 75 (D) 89

**15.** On 8th Feb., 2005 it was Tuesday. What was the day of the week on 8th Feb., 2004 ?

(A) Sunday (B) Tuesday

(C) Monday (D) Wednesday

**16.** The cost of type A rice is Rs. 25 per kg and type B rice is Rs. 30 per kg. If both type A and type B are mixed in the ratio 2 : 3, then the price per kg of the mixed variety of rice is

(A) Rs. 29 (B) Rs. 28

(C) Rs. 27 (D) Rs. 26

**17.** The population of a town was 240000 three years ago. If it increased by 3%, 2.5% and 5% respectively in the last three years, then the present population is

(A) 246051 (B) 265048

(C) 266049 (D) 269048

**18.** NAMEನ್ನು ಸಂಕೇತ ಬಳಸಿ 13261422 ಎಂದು ಬರೆದರೆ, TEAM ನ್ನು ಸಂಕೇತ ಬಳಸಿ ಹೇಗೆ ಬರೆಯಬಹುದು ?

(A) 7222614 (B) 1426227

(C) 7262214 (D) 7142622

ಈ ಕೆಳಕಂಡ ದತ್ತಾಂಶಗಳನ್ನಾಧರಿಸಿ ಪ್ರಶ್ನೆ ಸಂಖ್ಯೆ **19–24**ರನ್ನು ಉತ್ತರಿಸಿ :

**ರಾಜ್ಯವೊಂದರ ವಯಸ್ಸಿಗನುಸಾರವಾಗಿ ಜನಸಂಖ್ಯೆ ಹಂಚಿಕೆ**

| ವಯಸ್ಸಿನ ಗುಂಪು (ವರ್ಷಗಳಲ್ಲಿ) | ಶೇಕಡಾವಾರು |
|---|---|
| 15ರವರೆಗೆ | 30.00 |
| 25ರವರೆಗೆ | 47.75 |
| 35ರವರೆಗೆ | 65.00 |
| 45ರವರೆಗೆ | 79.50 |
| 55ರವರೆಗೆ | 93.75 |
| 65ರವರೆಗೆ | 98.87 |
| 110ರವರೆಗೆ | 100.00 |

**19.** ಈ ಕೆಳಗೆ ನಮೂದಿಸಿರುವ ಯಾವ ಒಂದು ವಯಸ್ಸಿನ ಗುಂಪು, ರಾಜ್ಯದ ಗರಿಷ್ಠ ಜನಸಂಖ್ಯೆಯನ್ನು ಹೊಂದಿದೆ?

(A) 0 – 15

(B) 15 – 35

(C) 25 – 45

(D) 46 ಕ್ಕಿಂತ ಮೇಲ್ಪಟ್ಟು

**20.** ಪ್ರತಿ 400000 ಜನರಲ್ಲಿ , 25 ವರ್ಷ ವಯಸ್ಸಿಗಿಂತ ಕೆಳಗಿರುವ ಜನರೆಷ್ಟು ?

(A) 181000 (B) 190000

(C) 194000 (D) 191000

**21.** 40 ದಶಲಕ್ಷ ಜನರು, 36 ವರ್ಷಗಳಿಗಿಂತ ಕೆಳಗಿನ ವಯಸ್ಸಿನವರು ಎಂದು ತಿಳಿದಿದ್ದರೆ, ಎಷ್ಟು ದಶಲಕ್ಷ ಜನರು (ಅಂದಾಜು) 56 – 65 ವರ್ಷ ವಯಸ್ಸಿನ ಗುಂಪಿನಲ್ಲಿರುತ್ತಾರೆ ?

(A) 4.2 ದಶಲಕ್ಷ

(B) 3.8 ದಶಲಕ್ಷ

(C) 3.15 ದಶಲಕ್ಷ

(D) ನಿರ್ಧರಿಸಲು ಸಾಧ್ಯವಿಲ್ಲ

**22.** 20 ದಶಲಕ್ಷ ಜನರು 56ಕ್ಕಿಂತ ಹೆಚ್ಚು ವಯಸ್ಸಿನವರಿದ್ದರೆ, 16 – 25ರ ವಯಸ್ಸಿನ ಗುಂಪು ಹಾಗೂ 46 – 55ರ ವಯಸ್ಸಿನ ಗುಂಪುಗಳ ನಡುವಿನ ಒಟ್ಟು ಜನರ ವ್ಯತ್ಯಾಸವೆಷ್ಟು ?

(A) 10.2 ದಶಲಕ್ಷ

(B) 11.2 ದಶಲಕ್ಷ

(C) 12.2 ದಶಲಕ್ಷ

(D) ನಿರ್ಧರಿಸಲು ಸಾಧ್ಯವಿಲ್ಲ

**23.** 46 – 55ರ ಹಾಗೂ 26 – 35ರ ವಯಸ್ಸಿನ ಗುಂಪುಗಳ ನಡುವಿನ ಜನರ ಸಂಖ್ಯೆಯ ವ್ಯತ್ಯಾಸ 3.9 ದಶಲಕ್ಷಗಳಿದ್ದರೆ, ರಾಜ್ಯದ ಒಟ್ಟು ಜನಸಂಖ್ಯೆ ಎಷ್ಟು ?

(A) 120 ದಶಲಕ್ಷ

(B) 130 ದಶಲಕ್ಷ

(C) 390 ದಶಲಕ್ಷ

(D) 139 ದಶಲಕ್ಷ

**24.** 15 – 35ರ ವಯಸ್ಸಿನ ಗುಂಪಿನಲ್ಲಿರುವ ಶೇಕಡಾವಾರು ಜನರ ಮತ್ತು 35ಕ್ಕಿಂತ ಹೆಚ್ಚು ವಯಸ್ಸಿನ ಶೇಕಡಾವಾರು ಜನರ ಅನುಪಾತವೆಷ್ಟು ?

(A) 2 : 1

(B) 65 : 35

(C) 1 : 1

(D) 35 : 65

**18.** If NAME is coded as 13261422 then how TEAM will be coded ?

(A) 7222614 (B) 1426227

(C) 7262214 (D) 7142622

Answer Questions **19** – **24** based on the following data :

**Age-wise population distribution of a State**

| Age Group (in years) | Percentage |
|---|---|
| Upto 15 | 30.00 |
| Upto 25 | 47.75 |
| Upto 35 | 65.00 |
| Upto 45 | 79.50 |
| Upto 55 | 93.75 |
| Upto 65 | 98.87 |
| Upto 110 | 100.00 |

**19.** Which one of the age groups listed below accounts for the maximum population in the State ?

(A) 0 – 15

(B) 15 – 35

(C) 25 – 45

(D) 46 and above

**20.** Out of every 400000 people, the number of persons below 25 years is

(A) 181000 (B) 190000

(C) 194000 (D) 191000

**21.** If it is known that there are 40 million people below 36 years of age, then how many million people (approximately) are in the age group of 56 – 65 ?

(A) 4.2 million

(B) 3.8 million

(C) 3.15 million

(D) Cannot be determined

**22.** If there are 20 million in the age group of 56 and above, what is the difference between the total number of people in the age group of 16 – 25 and 46 – 55 ?

(A) 10.2 million

(B) 11.2 million

(C) 12.2 million

(D) Cannot be determined

**23.** If the difference between the number of people in the age groups of 46 – 55 and 26 – 35 is 3.9 million, then the total population of the State is

(A) 120 million

(B) 130 million

(C) 390 million

(D) 139 million

**24.** What is the ratio of the percentage of people between the age group of 15 – 35 and the percentage of people above 35 years ?

(A) 2 : 1

(B) 65 : 35

(C) 1 : 1

(D) 35 : 65

**25.** ತರಗತಿಯಲ್ಲಿನ ಸಂವಹನದ ವಿಧ ಯಾವುದು ?
(A) ಸಮೂಹ ಸಂವಹನ
(B) ಸಾರ್ವಜನಿಕ ಸಂವಹನ
(C) ಅಂತರ್‌ವ್ಯಕ್ತಿ ಸಂವಹನ
(D) ಮಾಧ್ಯಮಾಧಾರಿತ ಸಂವಹನ

**26.** ಶಿಕ್ಷಣದ ಉತ್ತಮ ವಿಧಾನ ಯಾವುದು ?
(A) ರೇಖೀಯ ವಿಧಾನ
(B) ಅರೇಖೀಯ ವಿಧಾನ
(C) ಸಾಂಪ್ರದಾಯಿಕ ವಿಧಾನ
(D) ಆಧುನಿಕ ವಿಧಾನ

**27.** ಶಿಕ್ಷಕರನ್ನು ಯುಜಿಸಿಯು ಏನೆಂದು ಕರೆದಿದೆ?
(A) ಪ್ರಾಧ್ಯಾಪಕರು
(B) ಉತ್ಕೃಷ್ಟ ಪ್ರಾಧ್ಯಾಪಕರು
(C) ನಿಕಾಯ
(D) ಸಾಮರ್ಥ್ಯ ವರ್ಧಕರು

**28.** ಸಿಬಿಸಿಎಸ್ ವ್ಯವಸ್ಥೆಯಲ್ಲಿ ಕ್ರೆಡಿಟ್ ಎಂದರೇನು ?
(A) ವಿದ್ಯಾರ್ಥಿ ತೇರ್ಗಡೆಯಾದ ಶ್ರೇಯಾಂಕ
(B) ಪಾಠ ಮಾಡುವ ಒಟ್ಟು ಅವಧಿ
(C) ವಿದ್ಯಾರ್ಥಿ ಸಾಲ
(D) ವಿದ್ಯಾರ್ಥಿ ಪಡೆದ ಅಂಕ

**29.** ಪರಿಣಾಮಾತ್ಮಕ ಕಲಿಕೆಯ ಯಾವ ಗುಣಲಕ್ಷಣ ಇದಲ್ಲ?
(A) ಪಠ್ಯಕ್ರಮದಿಂದ ಮಾತ್ರ ಕಲಿಯುತ್ತಾರೆ
(B) ಜ್ಞಾನವನ್ನು ಹಂಚಿಕೊಳ್ಳುವುದು
(C) ಪ್ರಶ್ನಿಸುವುದು
(D) ಕುತೂಹಲ

**30.** ಶಿಕ್ಷಕರಿಗೆ ಇದೊಂದು ಉಪಯೋಗಕಾರಿ ಇ–ಸಂಪನ್ಮೂಲ ಸಾಧನ
(A) ಎಸಿಒಪಿ (B) ಪಿಎಸಿಒ
(C) ಒಪಿಎಸಿ (D) ಸಿಒಪಿಎ

**31.** ಜೀವಿಗಳು ಮತ್ತು ಅವುಗಳ ಪರಿಸರದ ನಡುವಿನ ವಿನಿಮಯದ ಅಧ್ಯಯನ
(A) ಬಯೋಲಜಿ
(B) ಸೈಕಾಲಜಿ
(C) ಎನ್‌ವಿರಾನ್‌ಮೆಂಟ್ ಸೈನ್ಸ್
(D) ಎಕೋಲಜಿ

**32.** ವಿಸ್ತೃತ ವನ್ಯಜೀವಿ ರಕ್ಷಣಾ ಕಾಯಿದೆ ಜಾರಿಗೆ ಬಂದ ವರ್ಷ
(A) 1972 (B) 1981
(C) 1985 (D) 1955

**33.** ಮರ ಕಡಿಯುವುದರ ವಿರುದ್ಧ ಕರ್ನಾಟಕದಲ್ಲಿ ವ್ಯಾಪಿಸಿದ ಚಳುವಳಿ
(A) ಚಿಪ್ಕೊ (B) ಕೈಗಾ
(C) ಅಪ್ಪಿಕೋ (D) ನಂದಿಕೂರು

**34.** ವಾಯುಮಾಲಿನ್ಯಕ್ಕೆ ಮುಖ್ಯ ಕಾರಣವಾಗುವ ಕಾಂಪೌಂಡುಗಳು ಯಾವುವು ?
(A) ಸಲ್ಫರ್ ಕಾಂಪೌಂಡುಗಳು
(B) ನೈಟ್ರೋಜನ್ ಕಾಂಪೌಂಡುಗಳು
(C) ಆಕ್ಸಿಜನ್ ಕಾಂಪೌಂಡುಗಳು
(D) ಹ್ಯಾಲೋಜಿನ್ ಕಾಂಪೌಂಡುಗಳು

**35.** ಸರೋವರ ಮತ್ತು ಸಮುದ್ರಗಳಲ್ಲಿ 'ಕೆಂಪು ಅಲೆ'ಗೆ ಕಾರಣ
(A) ಯುಟ್ರೊಫಿಕೇಶನ್ (B) ಕಂಜೆಷನ್
(C) ಆಕ್ಸಿಡೇಶನ್ (D) ಪ್ರಿಸಿಪಿಟೇಶನ್

**36.** ಶಬ್ದದ ತೀವ್ರತೆಯನ್ನು ಡೆಸಿಬಲ್‌ಗಳಲ್ಲಿ ಅಳೆಯುತ್ತಾರೆ. ಸಾಮಾನ್ಯ ಮಾತಿನ ಡೆಸಿಬಲ್ಸ್ ಎಷ್ಟಿರುತ್ತದೆ ?
(A) 30 (B) 60
(C) 90 (D) 120

**25.** What is the level of classroom communication ?

(A) Mass communication

(B) Public communication

(C) Interpersonal communication

(D) Mediated communication

**26.** Which is the best method of teaching ?

(A) Linear method

(B) Non-linear method

(C) Traditional method

(D) Modern method

**27.** UGC has called Teachers as what ?

(A) Professors

(B) Emeritus Professors

(C) Faculty

(D) Facilitators

**28.** What does credit means in CBCS system ?

(A) Class secured by student

(B) Number of teaching hours

(C) Student loan

(D) Marks secured

**29.** What is not the characteristic of effective learning ?

(A) They learn only from syllabus

(B) Sharing knowledge

(C) Questioning

(D) Curiosity

**30.** The following is a useful e-resource for teachers

(A) ACOP (B) PACO

(C) OPAC (D) COPA

**31.** The study of interactions between organism and their environment is

(A) Biology

(B) Psychology

(C) Environment Science

(D) Ecology

**32.** The comprehensive Wild Life Protection Act came into being in

(A) 1972 (B) 1981

(C) 1985 (D) 1955

**33.** The movement that spread in Karnataka to protest tree felling was

(A) Chipko (B) Kaiga

(C) Appiko (D) Nandikur

**34.** Which amongst the following are the major contaminants of air pollution ?

(A) Sulphur compounds

(B) Nitrogen compounds

(C) Oxygen compounds

(D) Halogen compounds

**35.** The cause for 'red tide' in the lakes and seas is due to

(A) Eutrophication (B) Congestion

(C) Oxidation (D) Precipitation

**36.** Noise levels are measured in decibels. What is the decibel of normal talk ?

(A) 30 (B) 60

(C) 90 (D) 120

**(ಅಂಧ ವಿದ್ಯಾರ್ಥಿಗಳಿಗೆ ಮಾತ್ರ)**

ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿ ಮತ್ತು **31 – 36**ರ ವರೆಗಿನ ಪ್ರಶ್ನೆಗಳನ್ನು ಉತ್ತರಿಸಿ :

ಉದ್ಘಾಟನೆಯ ದಿನ ಇತಿಹಾಸದ ನೆನಪಿನಿಂದ ಭಾವಪರವಶನಾದೆ. 20ನೇ ಶತಮಾನದ ಮೊದಲ ದಶಕದಲ್ಲಿ, ಆಂಗ್ಲೋ-ಬೋಯರ್ ಯುದ್ಧ ನಡೆದ ಕೆಲವು ವರ್ಷಗಳ ನಂತರ ಮತ್ತು ನಾನು ಜನ್ಮ ತಳೆಯುವ ಮುಂಚೆ, ದಕ್ಷಿಣ ಆಫ್ರಿಕಾದ ಬಿಳಿಯರು ಅವರಲ್ಲಿದ್ದ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡಿದ್ದರು ಮತ್ತು ಕರಿಯರ ವಿರುದ್ಧ ಅವರ ನೆಲದಲ್ಲೇ ಜನಾಂಗೀಯ ಪ್ರಭುತ್ವವನ್ನು ಸ್ಥಾಪಿಸಿದ್ದರು. ಅವರು ಅಂದು ಹುಟ್ಟು ಹಾಕಿದ ವ್ಯವಸ್ಥೆಯು ಜಗತ್ತಿನ ಯಾವ ಸಮಾಜಗಳೂ ಕಂಡರಿಯದ, ಅತ್ಯಂತ ಕ್ರೂರ, ಅಮಾನುಷ ಸಮಾಜದ ನಿರ್ಮಾಣಕ್ಕೆ ಮೂಲವಾಯಿತು. ಇಂದು 20ನೇ ಶತಮಾನದ ಕೊನೆದಶಕದಲ್ಲಿ ಮತ್ತು ನಾನು ಮನುಷ್ಯನಾಗಿ ಈ ಭೂಮಿಯ ಮೇಲೆ 8ನೇ ದಶಕವಾಗಿರುವಾಗ, ಈ ವ್ಯವಸ್ಥೆಯನ್ನು ಕಿತ್ತುಹಾಕಲಾಗಿದೆ ಮತ್ತು ವರ್ಣಭೇದವಿಲ್ಲದೇ ಎಲ್ಲಾ ಜನರ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಗೌರವಿಸುವ ವ್ಯವಸ್ಥೆಯಿಂದ ಅದನ್ನು ಸ್ಥಾನಪಲ್ಲಟ ಮಾಡಲಾಗಿದೆ. ಇಂತಹ ದಿನವನ್ನು ಕಾಣಲು ಕಾರಣ ಕಲ್ಪನೆಗೂ ನಿಲುಕದ ನನ್ನ ಸಹಸ್ರಾರು ಜನರ ತ್ಯಾಗ ಹಾಗೂ ನನ್ನ ಜನರು ಪಟ್ಟಂತಹ ಸಂಕಟ ಮತ್ತು ಅವರು ತೋರಿಸಿದ ಧೈರ್ಯಗಳನ್ನಾವುದನ್ನೂ ನಾವಿಂದು ಎಣಿಸಲಾಗದು ಅಥವಾ ಬೆಲೆಕಟ್ಟಲಾಗದು. ಹಿಂದೆ ಆದ ಹಾಗೆ ಇಂದೂ ಅನಿಸಿದ್ದೇನೆಂದರೆ ನಾನು ನನಗಿಂತ ಮುಂಚೆ ಗತಿಸಿದ ಸಹಸ್ರಾರು ಆಫ್ರಿಕಾ ದೇಶಪ್ರೇಮಿಗಳೆಲ್ಲರ ಸಾರಾಂಶ ಎಂದೆನಿಸಿತು. ಆ ದೀರ್ಘ ಮತ್ತು ಶ್ರೇಷ್ಠ ಜನರ ಪರಂಪರೆ ಇಂದು ಮುಕ್ತಾಯವಾಗಿದೆ ಮತ್ತು ನನ್ನಿಂದ ಅದು ಪುನರಾರಂಭವಾಗಿದೆ. ಈ ತ್ಯಾಗಗಳಿಂದ ಏನನ್ನು ಸಾಧಿಸಲು ಸಾಧ್ಯವಾಯಿತೆಂದು ಅವರಿಗೆ ತಿಳಿಸಲಾಗಲಿಲ್ಲವೆಂಬುದರ ಬಗ್ಗೆ ಮತ್ತು ಧನ್ಯವಾದಗಳನ್ನು ಅರ್ಪಿಸಲಾಗದ್ದರಿಂದ ಮನನೊಂದಿತ್ತು. ವರ್ಣಭೇದನೀತಿಯಿಂದಾಗಿ ನನ್ನ ದೇಶ ಮತ್ತು ಜನರ ಮೇಲೆ ಅಚ್ಚಳಿಯದ ಆಳವಾದ ಗಾಯವಾಗಿದೆ. ಈ ಗಾಯದಿಂದ ನಾವು ಹೊರಬರಬೇಕಾದರೆ ಅನೇಕ ವರ್ಷಗಳೇ ಬಹುಶಃ ತಲೆಮಾರುಗಳೇ ಬೇಕಾಗುತ್ತದೆ. ಆದರೆ ದಶಕಗಳಿಂದ ಆಚರಣೆಯಲ್ಲಿದ್ದ ಬರ್ಬರತೆ ಮತ್ತು ದಬ್ಬಾಳಿಕೆಗಳ ಪರಿಣಾಮ, ಉದ್ದೇಶವಿಲ್ಲದಿದ್ದರೂ ಬೇರೊಂದು ರೀತಿಯಲ್ಲಿ, ನಮ್ಮ ಕಾಲದ ಆಲಿವರ್ ಟಾಂಬೋಸ್, ವಾಲ್ಟರ್ ಸಿಸುಲಸ್, ಚೀಫ್ ಲುತುಲಿಸ್, ಯುಸೆಫ್ ಡ್ಯಾಡೂಸ್, ಬ್ರಾಮ್ ಫಿಶರ್ಸ್, ರಾಬರ್ಟ್ ಸೇಬುಕ್‌ವಿಸ್ ನಂತಹ ಇನ್ನೆಂದೂ ಕಾಣದಂತಹ ಅಪರಿಮಿತ ಧೈರ್ಯ, ಜ್ಞಾನ ಮತ್ತು ಹೃದಯ ಶ್ರೀಮಂತಿಕೆಯುಳ್ಳ ವ್ಯಕ್ತಿಗಳನ್ನು ಕೊಟ್ಟಿತು. ಬಹುಶಃ ಅಂತಹ ಆಳವಾದ ದಬ್ಬಾಳಿಕೆಗಳು ವ್ಯಕ್ತಿಯ ನಡತೆ ಉತ್ಕೃಷ್ಟತೆ ಮಟ್ಟವನ್ನು ಮುಟ್ಟಲು ಅಗತ್ಯವಾಗಬಹುದೇನೋ.

**31.** ಈ ಲೇಖಕರ ಪ್ರಕಾರ ವರ್ಣಭೇದ ನೀತಿಯೆಂದರೆ ಇಂತಹ ವ್ಯವಸ್ಥೆ

(A) ಶ್ರೀಮಂತಿಕೆಯ ಅಧಿಪತ್ಯ

(B) ಸಹಜವಾದ ಅಸಮಾನತೆಗಳು

(C) ಜನಾಂಗದ ಆಧಾರದ ಅಸಮಾನತೆ

(D) ಲಿಂಗದ ಆಧಾರದ ಮೇಲೆ ಪಕ್ಷಪಾತ

**32.** ವರ್ಣಭೇದ ಸಮಾಜದ ಬಗ್ಗೆ ಲೇಖಕರ ನಿಲುವು ಏನು ?

(A) ಇದು ಕೆಟ್ಟದ್ದು ಆದರೆ ಐತಿಹಾಸಿಕವಾಗಿ ಅಗತ್ಯ

(B) ಇದು ಕೆಟ್ಟದ್ದು ಆದರೆ ಸಹಿಸಿಕೊಳ್ಳಬಹುದು

(C) ಇತಿಹಾಸದಲ್ಲಿ ಯಾವ ಸಮಾಜವೂ ಇಷ್ಟು ಕೆಟ್ಟದ್ದಾಗಿರಲಿಲ್ಲ

(D) ಇದಕ್ಕಿಂತ ಕೆಟ್ಟದಾದ ಸಮಾಜಗಳಿವೆ

**(For Blind Candidates Only)**

Read the following passage carefully and answer the questions **31** – **36** :

On the day of the inauguration, I was overwhelmed with a sense of history. In the first decade of the twentieth century, a few years after the bitter Anglo-Boer war and before my own birth, the white-skinned peoples of South Africa patched up their differences and erected a system of racial domination against the dark-skinned peoples of their own land. The structure they created formed the basis of one of the harshest, most inhumane, societies the world has ever known. Now, in the last decade of the twentieth century, and my own eighth decade as a man, that systems had been overturned forever and replaced by one that recognised the rights and freedoms of all peoples, regardless of the colour of their skin. That day had come about through the unimaginable sacrifies of thousands of my people, people whose suffering and courage can never be counted or repaid. I felt that day, as I have on so many other days, that I was simply the sum of all those African patriots who had gone before me. That long and noble line ended and now began again with me. I was pained that I was not able to thank them and that they were not able to see what their scarifies had wrought. The policy of apartheid created a deep and lasting wound in my country and my people. All of us will spend many years, if not generations, recovering from that profound hurt. But the decades of oppression and brutality had another, unintended, effect, and that was that it produced the Oliver Tambos, the Walter Sisulus, the Chief Luthulis, the Yusuf Dadoos, the Bram Fischers, the Robert Sobukwes of our time – men of such extraordinary courage, wisdom and generosity that their like may never be known again, perhaps it requires such depths of oppression to create such heights of character.

**31.** The author says that apartheid was a system of

(A) Domination by wealth

(B) Natural inequalities

(C) Inequality based on race

(D) Discrimination based on gender

**32.** What is the author's view of apartheid society ?

(A) It was bad but historically necessary

(B) It was bad but tolerable

(C) No society in history had been so bad

(D) There were societies far worse than it

**33.** ತಾನು ಆಫ್ರಿಕಾ ದೇಶಪ್ರೇಮಿಗಳ ಸಾರಾಂಶ ಎಂದು ಲೇಖಕರು ಹೇಳಿದರ ಅರ್ಥವೇನು ?

(A) ತನ್ನ ನಿಯಮಿತ ಕಾರ್ಯದಲ್ಲಿ ಯಶಸ್ವಿಯಾಗಿಲ್ಲ

(B) ತಾನು ಆಫ್ರಿಕಾದ ದೇಶಪ್ರೇಮಿಗಳಿಗಿಂತ ಉತ್ತಮವಾದವನು

(C) ದೇಶಪ್ರೇಮಿಗಳ ಕಾರ್ಯವನ್ನು ಮುಂದುವರೆಸಿಕೊಳ್ಳುವುದೇ ಈತನ ಕೆಲಸ

(D) ಈತನ ಕೆಲಸವನ್ನು ಹೋಲಿಸಲಾಗದು

**34.** ಲೇಖಕರು ಈ ರೀತಿ ಹೇಳುತ್ತಾರೆ

(A) ವರ್ಣಭೇದನೀತಿ ಈಗ ಮುಗಿಯಿತು ಮತ್ತು ಅದನ್ನು ಮರೆಯಲಾಗಿದೆ

(B) ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯಾನಂತರ ವರ್ಣಭೇದನೀತಿಯಲ್ಲಿ ಯಾವುದೇ ಪರಿಣಾಮ ಉಂಟಾಗುವುದಿಲ್ಲ

(C) ಕೆಲವರು ಮಾತ್ರ ವರ್ಣಭೇದನೀತಿಯನ್ನು ನೆನಪಿಸಿಕೊಳ್ಳುವರು

(D) ಅದರ ಪರಿಣಾಮದಿಂದ ಚೇತರಿಸಿಕೊಳ್ಳಲು ಹೆಚ್ಚು ಕಾಲ ಬೇಕಾಗುತ್ತದೆ

**35.** ವರ್ಣಭೇದನೀತಿಯ ಉದ್ದೇಶವಲ್ಲದ ಫಲಿತಾಂಶ ಯಾವುದು ?

(A) ಇದು ಜನಾಂಗೀಯ ವೈರತ್ವವನ್ನು ಕಡಿಮೆಗೊಳಿಸಿದೆ

(B) ಇದು ಬಿಳಿಯರನ್ನು ಹೆಚ್ಚು ಸಹಾನುಭೂತಿಗಳಾಗಿ ಮಾಡಿತು

(C) ಇದು ಕೆಲವು ಶ್ರೇಷ್ಠ ವ್ಯಕ್ತಿಗಳನ್ನು ನಿರ್ಮಾಣ ಮಾಡಿತು

(D) ಇದು ಆಫ್ರಿಕಾದವರು ಬಿಳಿಯರನ್ನು ಅನುಕರಿಸುವಂತೆ ಮಾಡಿದೆ

**36.** ಲೇಖಕರು ಈ ರೀತಿ ವಾದಿಸಿದ್ದಾರೆ

(A) ಜನಾಂಗೀಯ ದಬ್ಬಾಳಿಕೆ ಒಳ್ಳೆಯದು ಏಕೆಂದರೆ ಅದು ಶ್ರೇಷ್ಠ ವ್ಯಕ್ತಿಗಳನ್ನು ನಿರ್ಮಾಣ ಮಾಡುತ್ತದೆ

(B) ವರ್ಣಭೇದನೀತಿಯನ್ನು ನಾವು ಸಹಿಸಿಕೊಳ್ಳಬೇಕಾಗುತ್ತದೆ ಏಕೆಂದರೆ ಅದು ನಾಯಕರನ್ನು ನಿರ್ಮಾಣ ಮಾಡುತ್ತದೆ

(C) ವರ್ಣಭೇದನೀತಿಯು ಸಂಪೂರ್ಣವಾಗಿ ಪ್ರತಿಭಟನೆಯನ್ನು ಮಟ್ಟಹಾಕಿತು

(D) ವರ್ಣಭೇದನೀತಿಯು ಕೆಟ್ಟದ್ದು ಆದರೆ ಅದರಿಂದ ನಿರೀಕ್ಷೆ ಮಾಡದ ಪರಿಣಾಮಗಳಾದಾವು

**33.** What does the author mean by saying that he was the sum of all African patriots ?

(A) That he had not succeeded in his mission

(B) That he was superior to all African patriots

(C) That his work was the continuation of the work of the patriots

(D) That his work was incomparable

**34.** The author says that

(A) Now that apartheid is over it will be forgotten

(B) Apartheid would not leave any impact after South Africa's freedom

(C) Only some people would remember apartheid

(D) It would take a lot of time to recover from its effect

**35.** What is the unintended result of apartheid ?

(A) It reduced racial hatred

(B) It made the whites more sympathetic

(C) It created certain great individuals

(D) It made the Africans imitate the whites

**36.** Does the writer argue that

(A) Racial oppression is good because it creates great individuals

(B) We should tolerate apartheid because it creates heroes

(C) Apartheid totally suppressed resistance

(D) Apartheid is bad but it had unexpected consequences

**37.** ಮನೋಭಾವವನ್ನು ಈ ಮಾಪನ ಬಳಸಿ ಅಳೆಯಬಹುದು

(A) 5-ಬಿಂದು ಮಾಪನ

(B) ವೇವ್‌ಫಾರ್ಮ್

(C) ರಿಕ್ಟರ್ ಮಾಪನ

(D) ಲೈಕರ್ಟ್ ಮಾಪನ

**38.** ಏರೋಬಿಕ್ ವ್ಯಾಯಾಮವು ಆತಂಕ ಮನಸ್ಥಿತಿಯನ್ನು ಕಡಿಮೆಗೊಳಿಸುತ್ತದೆ ಎಂಬ ಪ್ರಾಕ್‌ಕಲ್ಪನೆಯಲ್ಲಿ ಸ್ವತಂತ್ರ ಪರಿವರ್ತಕ (IV) ಮತ್ತು ಅವಲಂಬಿತ ಪರಿವರ್ತಕ (DV)ಗಳನ್ನು ಗುರುತಿಸಿ.

(A) ಏರೋಬಿಕ್ ವ್ಯಾಯಾಮ (DV) ಮತ್ತು ಆತಂಕದ ಹಂತಗಳು (IV)

(B) ಏರೋಬಿಕ್ ವ್ಯಾಯಾಮ (IV) ಮತ್ತು ಆತಂಕದ ಹಂತಗಳು (DV)

(C) ಆತಂಕ (IV) ಮತ್ತು ಹಂತಗಳನ್ನು ಕಡಿಮೆ ಮಾಡುವುದು (DV)

(D) ವ್ಯಾಯಾಮ ಮತ್ತು ಆತಂಕ (IV) ಕಡಿಮೆ ಮಾಡುವುದು (DV)

**39.** ಈ ಕೆಳಗಿನವುಗಳಲ್ಲಿ ಯಾವುದು ಗುಣಾತ್ಮಕ ಸಂಶೋಧನಾ ವಿಧಾನ ?

(A) ಸಂದರ್ಶನ ವಿಧಾನ

(B) ಸಮೀಕ್ಷಾ ವಿಧಾನ

(C) ಪ್ರಯೋಗಾತ್ಮಕ ವಿಧಾನ

(D) ಐತಿಹಾಸಿಕ ವಿಧಾನ

**40.** ಸಂಶೋಧನೆಯಲ್ಲಿ ಗ್ರಂಥಋಣವನ್ನು ಬಳಸಲು ಇರುವ ವಿಧಾನ ಈ ಕೆಳಗಿನವುಗಳಲ್ಲಿ ಯಾವುದು ?

(A) ಪಿಎಎ

(B) ಇ-ನಿಯತಕಾಲಿಕ

(C) ಒಪಿಎಸಿ

(D) ಎಪಿಎ

**41.** ಕೃತಿಚೌರ್ಯ ಪರೀಕ್ಷಿಸಲು ಈ ತಂತ್ರಾಂಶವನ್ನು ಬಳಸಲಾಗುತ್ತದೆ

(A) ಸೌಂಡ್ ಫೋರ್ಜ್

(B) ಗ್ರಾಮರ್‌ಲೀ

(C) ಟರ್ನಿಟಿನ್

(D) ಫಾಸ್ಟ್ ಪೆನ್ಸಿಲ್

**42.** ಸಿಗರೇಟು ಸೇವನೆಯಿಂದ ಶ್ವಾಸಕೋಶ ಕ್ಯಾನ್ಸರ್ ಉಂಟಾಗುತ್ತದೆ ಎನ್ನುವ ಪ್ರಾಕ್‌ಕಲ್ಪನೆಯಲ್ಲಿ ಸ್ವತಂತ್ರ ಪರಿವರ್ತಕ (IV) ಮತ್ತು ಅವಲಂಬಿತ ಪರಿವರ್ತಕ (DV)ಗಳನ್ನು ಗುರುತಿಸಿ.

(A) ಸಿಗರೇಟು ಸೇವನೆ (DV), ಶ್ವಾಸಕೋಶ ಕ್ಯಾನ್ಸರ್ (IV)

(B) ಕ್ಯಾನ್ಸರ್ ಮತ್ತು ಸಿಗರೇಟು ಸೇವನೆ (IV), ಕಾರಣಗಳು (DV)

(C) ಸಿಗರೇಟು ಸೇವನೆ (IV), ಶ್ವಾಸಕೋಶ ಕ್ಯಾನ್ಸರ್ (DV)

(D) ಕಾರಣಗಳು (DV), ಶ್ವಾಸಕೋಶ ಕ್ಯಾನ್ಸರ್ (IV)

**37.** Attitudes can be measured using this scale

(A) 5-point scale

(B) Waveform

(C) Richter scale

(D) Likert scale

**38.** Aerobic exercise will reduce levels of state anxiety – Identify independent (IV) and dependent variables (DV)

(A) Aerobic exercise (DV) and levels of state anxiety (IV)

(B) Aerobic exercise (IV) and levels of state anxiety (DV)

(C) Anxiety (IV) and reducing levels (DV)

(D) Exercise and anxiety (IV), reducing (DV)

**39.** Which of the following is qualitative method of research ?

(A) Interview method

(B) Survey method

(C) Experimental method

(D) Historical method

**40.** The following is a format of citing bibliography in research

(A) PAA

(B) E-JOURNAL

(C) OPAC

(D) APA

**41.** This software is a plagiarism checker

(A) Sound forge

(B) Grammerly

(C) Turnitin

(D) Fast Pencil

**42.** Identify independent (IV) and dependent variables (DV) in the hypothesis : Smoking Causes Lung Cancer.

(A) Smoking (DV), Lung Cancer (IV)

(B) Cancer and Smoking (IV), Causes (DV)

(C) Smoking (IV), Lung Cancer (DV)

(D) Causes (DV), Lung Cancer (IV)

**43.** ಸಂವಾಹಕ ಮತ್ತು ಸಂವಾಹಿತನ ಸಂದೇಶದ ನಡುವೆ ಅರ್ಥ ವ್ಯತ್ಯಾಸ ಉಂಟಾಗುವುದನ್ನು ಹೀಗೆ ಕರೆಯಬಹುದು

(A) ವರ್ಚ್ಯುವಲ್ ಡೀಕೋಡಿಂಗ್

(B) ಅಬೆರಂಟ್ ಡೀಕೋಡಿಂಗ್

(C) ಫ್ಯಾಕ್ಚುವಲ್ ಡೀಕೋಡಿಂಗ್

(D) ಫಾರ್ಮಲ್ ಡೀಕೋಡಿಂಗ್

**44.** 'ಡಿಜಿಟಲ್ ಡಿವೈಡ್' ಎಂದರೆ

(A) ನಗರ ಮತ್ತು ಗ್ರಾಮೀಣ ನಡುವಿನ ಕಂದಕ

(B) ತಾಂತ್ರಿಕ ಪರಿಣಿತರು ಮತ್ತು ಕಂಪ್ಯೂಟರ್ ಅನಕ್ಷರಸ್ಥರ ನಡುವಿನ ಕಂದಕ

(C) ಮಾಹಿತಿ ಉಳ್ಳವರು ಮತ್ತು ಮಾಹಿತಿ ರಹಿತರ ನಡುವಿನ ಕಂದಕ

(D) ಅಭಿವೃದ್ಧಿಶೀಲ ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ನಡುವಿನ ಕಂದಕ

**45.** ಚಾರ್ಲಿ ಚಾಪ್ಲಿನ್ನನ ಸಿನಿಮಾ 'ದಿ ಮಾಡರ್ನ್ ಟೈಮ್ಸ್'

(A) ಕೈಗಾರಿಕಾ ಸಮಾಜವನ್ನು ಗೇಲಿ ಮಾಡುತ್ತದೆ

(B) ಸಾಂಪ್ರದಾಯಿಕ ಸಮಾಜವನ್ನು ಟೀಕಿಸುತ್ತದೆ

(C) ಕೈಗಾರಿಕಾ ಸಮಾಜದ ಕುರಿತು ವಿಷಾದಿಸುತ್ತದೆ

(D) ಕೈಗಾರಿಕಾ ಸಮಾಜವನ್ನು ಹೊಗಳುತ್ತದೆ

**46.** ವೆಬ್ ಆಧಾರಿತ ವಿಚಾರ ವಿನಿಮಯ ಮಾಡುವ ಜನರ ಗುಂಪನ್ನು ಹೀಗೆ ಕರೆಯಬಹುದು

(A) ಮೀಡಿಯೇಟೆಡ್ ಕಮ್ಯುನಿಟಿ

(B) ವರ್ಚ್ಯುವಲ್ ಕಮ್ಯುನಿಟಿ

(C) ಅಂತರರಾಷ್ಟ್ರೀಯ ಕಮ್ಯುನಿಟಿ

(D) ಇಂಟರ್‌ನೆಟ್ ಕಮ್ಯುನಿಟಿ

**47.** ಫ್ಯಾಟಿಕ್ ಸಂವಹನವೆಂದರೆ

(A) ಸಂವಹನದ ಆರಂಭದ ಮಾತುಗಳು

(B) ಸಂವಹನದ ಅಂತಿಮ ಮಾತುಗಳು

(C) ಸಾಂಪ್ರದಾಯಿಕ ಸಂವಹನದ ಇನ್ನೊಂದು ಹೆಸರು

(D) ಅಸಾಂಪ್ರದಾಯಿಕ ಸಂವಹನದ ಇನ್ನೊಂದು ಹೆಸರು

**48.** ಜನಪ್ರಿಯ ಸಂಸ್ಕೃತಿಯೆಂದರೆ

(A) ವರ್ಗ ಸಂಸ್ಕೃತಿ

(B) ಸಮೂಹ ಸಂಸ್ಕೃತಿ

(C) ಮಧ್ಯಮ ವರ್ಗ ಸಂಸ್ಕೃತಿ

(D) ಅಶ್ಲೀಲ ಸಂಸ್ಕೃತಿ

**43.** Mismatch of meaning between sender and receiver may be termed as

(A) Virtual decoding

(B) Aberrant decoding

(C) Factual decoding

(D) Formal decoding

**44.** 'Digital divide' means

(A) The gap between urban and rural

(B) The gap between techno savvy and computer illiterates

(C) The gap between information rich and information poor

(D) The gap between developed and developing nations

**45.** Charlie Chaplin's film 'Modern Times'

(A) Makes fun of industrial society

(B) Criticises traditional society

(C) Regrets the industrial society

(D) Praises industrial society

**46.** Group of people formed through web based interaction

(A) Mediated Community

(B) Virtual Community

(C) International Community

(D) Internet Community

**47.** Phatic communication means

(A) Opening remarks in communication

(B) Closing remarks in communication

(C) Another name for formal communication

(D) Another name for informal communication

**48.** Popular culture refers to

(A) Class culture

(B) Mass culture

(C) Workers culture

(D) Vulgar culture

**49.** ಈ ಕೆಳಗೆ ಎರಡು ಹೇಳಿಕೆಗಳು (I) ಮತ್ತು (II)ನ್ನು ಕೊಡಲಾಗಿದೆ. ನಂತರ ಅವುಗಳ ನಿರ್ಧಾರಗಳನ್ನು (a) ಮತ್ತು (b) ನೀಡಲಾಗಿದೆ. ಹೇಳಿಕೆಗಳನ್ನು ನೀವು ಸರಿ ಎಂದೇ ಪರಿಗಣಿಸಬೇಕು. ಯಾವ ನಿರ್ಧಾರಗಳು ಹೇಳಿಕೆಗನುಗುಣವಾಗಿ ತರ್ಕಬದ್ಧವಾಗಿವೆ ?

**ಹೇಳಿಕೆಗಳು :**

I) ಕೆಲವು ಕೇಕ್‌ಗಳು ಮಿಠಾಯಿಗಳಾಗಿರುತ್ತವೆ.

II) ಎಲ್ಲಾ ಮಿಠಾಯಿಗಳು ಚಾಕಲೇಟ್‌ಗಳಾಗಿರುತ್ತವೆ.

**ನಿರ್ಧಾರಗಳು :**

a) ಕೆಲವು ಚಾಕಲೇಟ್‌ಗಳು ಮಿಠಾಯಿಗಳಾಗಿರುತ್ತವೆ.

b) ಕೆಲವು ಮಿಠಾಯಿಗಳು ಕೇಕ್‌ಗಳಾಗಿರುವುದಿಲ್ಲ.

(A) ಕೇವಲ ನಿರ್ಧಾರ (a) ಸರಿ

(B) ಕೇವಲ ನಿರ್ಧಾರ (b) ಸರಿ

(C) ನಿರ್ಧಾರ (a) ಅಥವಾ ನಿರ್ಧಾರ (b) ಎರಡೂ ಸರಿಯಲ್ಲ

(D) ನಿರ್ಧಾರ (a) ಮತ್ತು ನಿರ್ಧಾರ (b) ಎರಡೂ ಸರಿ

**50.** ಈ ಕೆಳಗಿನ ಪ್ರಶ್ನೆಯಲ್ಲಿ ಒಂದು ಹೇಳಿಕೆಗೆ ಎರಡು ಊಹೆಗಳಿವೆ (i) ಮತ್ತು (ii). ಊಹೆಯೆಂದರೆ ಏನಾದರೂ ಆಗಿರಬೇಕೆಂದುಕೊಳ್ಳುವುದು ಅಥವಾ ಭಾವಿಸುವುದು. ಈ ಕೆಳಗಿನ ಹೇಳಿಕೆ ಮತ್ತು ಊಹೆಗಳನ್ನು ನೋಡಿ, ಯಾವ ಊಹೆ, ಹೇಳಿಕೆಯಲ್ಲಿ ಸೂಚ್ಯವಾಗಿದೆಯೆಂದು ತಿಳಿಸಿ.

**ಹೇಳಿಕೆ** : ''ನೀವು ಒಂದು ವರ್ಷದ ಪರೀಕ್ಷಣಾ ಸಂಪಾದಕರಾಗಿ ನಿಯುಕ್ತರಾಗಿದ್ದೀರ ಮತ್ತು ನಿಮ್ಮ ಕಾರ್ಯಕ್ಷಮತೆಯನ್ನು, ದೃಢೀಕರಣದ ಅವಧಿಯ ಕೊನೆಗೆ ಪರಿಶೀಲಿಸಲಾಗುತ್ತದೆ''. – ನೇಮಕಾತಿ ಪತ್ರದ ಒಂದು ಸಾಲು.

**ಊಹೆಗಳು :**

i) ಒಬ್ಬ ವ್ಯಕ್ತಿಯ ಕಾರ್ಯಕ್ಷಮತೆ ನೇಮಕಾತಿಯ ವೇಳೆ ಸರಿಯಾಗಿ ತಿಳಿದಿರುವುದಿಲ್ಲ.

ii) ಸಾಧಾರಣವಾಗಿ ಒಬ್ಬ ವ್ಯಕ್ತಿಯು ಪರೀಕ್ಷಣಾ ಅವಧಿಯಲ್ಲಿ ತನ್ನ ಮೌಲ್ಯವನ್ನು ಸಾಬೀತು ಪಡಿಸಲು ಯತ್ನಿಸುತ್ತಾನೆ.

(A) ಕೇವಲ ಊಹೆ (i) ಮಾತ್ರ ಸೂಚ್ಯವಾಗಿದೆ

(B) ಕೇವಲ ಊಹೆ (ii) ಮಾತ್ರ ಸೂಚ್ಯವಾಗಿದೆ

(C) ಊಹೆ (i) ಅಥವಾ (ii) ಸಹ ಸೂಚ್ಯವಾಗಿಲ್ಲ

(D) ಎರಡೂ ಊಹೆಗಳು ಸೂಚ್ಯವಾಗಿವೆ

**51.** ಈ ಕೆಳಗಿನ ಪ್ರಶ್ನೆಯಲ್ಲಿ, ಎರಡು ವಾದಗಳನ್ನು ಕೊಡಲಾಗಿದೆ. ಯಾವ ವಾದ ''ಪ್ರಬಲ''ವಾಗಿದೆ ಮತ್ತು ಯಾವ ವಾದ ''ದುರ್ಬಲ''ವಾಗಿದೆ ಎಂದು ನಿರ್ಧರಿಸಿ, ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

**ಹೇಳಿಕೆ :** ನಮ್ಮ ದೇಶದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಹಿರಿಯ ನಿರ್ವಾಹಕನ ಸಂಬಳದ ಮೇಲೆ ಮಿತಿ ಇರಬೇಕೆ?

**ವಾದಗಳು :**

i) ಹೌದು, ಇಲ್ಲವಾದರೆ ಅನಾರೋಗ್ಯಕರ ಸ್ಪರ್ಧೆಗೆ ಮತ್ತು ಹೋಲಿಕೆಗೆ ಕಾರಣವಾಗಬಹುದು ಮತ್ತು ನಮ್ಮ ಉದ್ಯಮಕ್ಕೆ ಇದನ್ನು ಎದುರಿಸುವ ಸಾಮರ್ಥ್ಯವಿಲ್ಲದಂತಾಗುತ್ತದೆ.

ii) ಇಲ್ಲ, ಆರ್ಥಿಕ ಉದಾರೀಕರಣದ ಆರೋಹಣ ಶೈಲಿಯಲ್ಲಿ, ಅಂತಹ ಯಾವುದೇ ನಡೆಯನ್ನು ಪ್ರತಿ ಉತ್ಪಾದಕ ಎಂದು ತಿಳಿಯಲಾಗುವುದು. ಆರ್ಥಿಕತೆ ಮುಂದುವರೆದಲ್ಲಿ ಈ ಅಸಮಾನತೆಗಳು ಕಡಿಮೆಯಾಗುತ್ತದೆ.

(A) ಕೇವಲ ವಾದ (i) ಪ್ರಬಲವಾಗಿದೆ

(B) ಕೇವಲ ವಾದ (ii) ಪ್ರಬಲವಾಗಿದೆ

(C) ವಾದ (i) ಅಥವಾ ವಾದ (ii) ಪ್ರಬಲವಾಗಿಲ್ಲ

(D) ಎರಡೂ ವಾದಗಳು ಪ್ರಬಲವಾಗಿದೆ

**52.** ಈ ಕೆಳಗಿನ ನಾಲ್ಕು A – D ಪದಗಳಲ್ಲಿ ಒಂದು ಭಿನ್ನವಾಗಿದೆ. ಅದು ಯಾವುದೆಂದು ಗುರುತಿಸಿ.

(A) ಬೆಳ್ಳಿ ಬಣ್ಣದ ಪ್ಲಾಸ್ಟಿಕ್

(B) ಬೆಳ್ಳಿ

(C) ಬಿರಡೆ

(D) ಮರ

**53.** ಮೇಲ್ತುದಿಯಲ್ಲಿ ಕೊಟ್ಟ ಜೋಡಿ ಪದಗಳಿಗಿರುವ ಸಂಬಂಧವನ್ನೇ ಹೊಂದಿದ ಪದಗಳ ಜೋಡಿಯನ್ನು ಆರಿಸಿ.

| | | |
|---|---|---|
| | **ನಿಕೃಷ್ಟ** | : **ಮಹತ್ವ** |
| (A) | ಅಗತ್ಯಕ್ಕಿಂತ ಹೆಚ್ಚಿನ | : ಚರ್ಚೆ |
| (B) | ಭವ್ಯವಾದ | : ಸಂಪತ್ತು |
| (C) | ನೀರಸ | : ಸ್ವಂತಿಕೆ |
| (D) | ಓರೆಯಾದ | : ಜನಪ್ರಿಯತೆ |

**49.** Two statements (I) and (II) given below are followed by two conclusions (a) and (b). You have to consider the statements are true. Which of the given conclusions logically follows from the given statements ?

**Statements** :

I) Some pastries are toffees.
II) All toffees are chocolates.

**Conclusions** :

a) Some chocolates are toffees.
b) Some toffees are not pastries.

(A) Only conclusion (a) follows
(B) Only conclusion (b) follows
(C) Neither conclusion (a) nor conclusion (b) follows
(D) Both conclusions (a) and (b) follow

**50.** In the following question a statement is followed by two assumptions (i) and (ii). An assumption is something supposed or taken for granted. Consider the statement and the following assumptions and decode which of the following assumptions is implicit in the statement ?

**Statement** : "You are appointed as an editor with a probation period of one year and your performance will be reviewed at the end of the period of confirmation" – a line in an appointment letter.

**Assumptions** :

i) The performance of an individual generally is not known at the time of appointment offer.
ii) Generally an individual tries to prove his worth in the probation period.

(A) Only assumption (i) is implicit
(B) Only assumption (ii) is implicit
(C) Neither assumption (i) nor (ii) is implicit
(D) Both the assumptions are implicit

**51.** The question below is followed by two arguments (i) and (ii). Decide which of the arguments is "strong" and which is "weak". Choose the correct answer from the given below.

**Statement** : Should there be a ceiling on the salary of top executives of multinational companies in our country ?

**Arguments** :

i) Yes, otherwise it would lead to unhealthy competition and comparison and our own industry would not be able to withstand that.
ii) No, with the ascent of liberalisation of economy, any such move would be counter productive. Once the economy picks up, this disparity will be reduced.

(A) Only the argument (i) is strong
(B) Only the argument (ii) is strong
(C) Neither argument (i) nor argument (ii) is strong
(D) Both the arguments are strong

**52.** Among the four terms marked A – D, three terms are similar and one is dissimilar. Find the one that is not similar.

(A) Silver coloured plastic
(B) Silver
(C) Cork
(D) Wood

**53.** Choose the pair of words which shows the same relationship as given at the top.

| | | | |
|---|---|---|---|
| | **Paltry** | : | **Significance** |
| (A) | Redundant | : | Discussion |
| (B) | Opulent | : | Wealth |
| (C) | Banal | : | Originality |
| (D) | Oblique | : | Familiarity |

**54.** ಈ ಕೆಳಗಿನವುಗಳಲ್ಲಿ ತಾರ್ಕಿಕವಾಗಿ ಸಮನಾಗಿರುವ ವಾಕ್ಯ ಯಾವುದು ? ''ಇಂದು ಭಾನುವಾರವಾದರೆ, ಮ್ಯಾಟ್ ಹಾಕಿ ಆಡಲು ಸಾಧ್ಯವಿಲ್ಲ''

(A) ಇಂದು ಭಾನುವಾರ ಮತ್ತು ಮ್ಯಾಟ್ ಹಾಕಿ ಆಡಬಹುದು

(B) ಮ್ಯಾಟ್ ಹಾಕಿ ಆಡುತ್ತಾನೆಂದರೆ, ಇಂದು ಭಾನುವಾರ ಅಲ್ಲ

(C) ಇಂದು ಭಾನುವಾರವಲ್ಲ ಮತ್ತು ಮ್ಯಾಟ್ ಹಾಕಿ ಆಡಲು ಸಾಧ್ಯವಿಲ್ಲ

(D) ಮ್ಯಾಟ್ ಹಾಕಿ ಆಡುತ್ತಾನೆಂದರೆ ಮಾತ್ರ ಇಂದು ಭಾನುವಾರವಲ್ಲ

**55.** ಸಿಮ್ (SIM) ಎಂದರೆ

(A) ಸಬ್‌ಸ್ಕ್ರೈಬರ್ ಇಂಟಿಗ್ರೇಟೆಡ್ ಮಾಡ್ಯೂಲ್

(B) ಸ್ಟ್ಯಾಂಡರ್ಡ್ ಇಂಟಿಗ್ರೇಟೆಡ್ ಮಾಡ್ಯೂಲ್

(C) ಸಬ್‌ಸ್ಕ್ರೈಬರ್ ಐಡೆಂಟಿಟಿ ಮಾಡ್ಯೂಲ್

(D) ಸ್ಟ್ಯಾಂಡರ್ಡ್ ಐಡೆಂಟಿಟಿ ಮಾಡ್ಯೂಲ್

**56.** ಲೈಟ್ ಎಮಿಟಿಂಗ್ ಡಯೋಡ್ (LED) ಏನನ್ನು ಪರಿವರ್ತಿಸುತ್ತದೆ ?

(A) ಬೆಳಕಿನ ಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ

(B) ವಿದ್ಯುತ್ ಶಕ್ತಿಯನ್ನು ಬೆಳಕಿನ ಶಕ್ತಿಯನ್ನಾಗಿ

(C) ಉಷ್ಣ ಶಕ್ತಿಯನ್ನು ಬೆಳಕಿನ ಶಕ್ತಿಯನ್ನಾಗಿ

(D) ಯಾಂತ್ರಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ

**57.** ಒಂದು ಕಂಪ್ಯೂಟರ್ ಪ್ರೋಗ್ರಾಂನಲ್ಲಿರುವ ದೋಷವನ್ನು ________ ಎಂದು ಕರೆಯುತ್ತಾರೆ.

(A) ವೈರಸ್

(B) ಬಗ್

(C) ಫೇಟಲ್ ಎರರ್

(D) ಪವರ್ ಫೇಲ್ಯೂರ್

**58.** ಈ ಕೆಳಕಂಡದ್ದರಲ್ಲಿ ಸರ್ಚ್ ಇಂಜಿನ್ ಯಾವುದು ?

(A) ಫೇಸ್‌ಬುಕ್

(B) ಯೂಟ್ಯೂಬ್

(C) ಎಂಎಸ್‌ಎನ್

(D) ವಿಂಡೋಸ್

**59.** ಗೂಢಲಿಪೀಕರಣ (Encryption) ಎಂದರೆ

(A) ಅನಧಿಕೃತ ಪ್ರವೇಶ ತಡೆಯಲು ಸಂದೇಶಗಳ ಕೋಡಿಂಗ್ ಮಾಡುವುದು

(B) ಅನಧಿಕೃತ ಬಳಕೆದಾರರನ್ನು ತಡೆಯಲು ಕಂಪ್ಯೂಟರ್‌ಗಳನ್ನು ಕೋಡಿಂಗ್ ಮಾಡುವುದು

(C) ಕಂಪ್ಯೂಟರ್ ಬಿಡಿಭಾಗಗಳಲ್ಲಿ ಬಾರ್‌ಕೋಡ್‌ಗಳನ್ನು ರಚಿಸುವುದು

(D) ಹಾರ್ಡ್ ಕಾಪಿಯನ್ನು ಸಾಫ್ಟ್ ಕಾಪಿಯನ್ನಾಗಿ ಪರಿವರ್ತಿಸುವುದು

**60.** ಡಿಜಿಟಲ್ ಸಹಿ ಎಂದರೆ

(A) ಒಬ್ಬ ವ್ಯಕ್ತಿಯ ವಿಶಿಷ್ಟ ಭೌತಿಕ ಲಕ್ಷಣ ಅಳೆಯುವ ಒಂದು ಡಿಜಿಟಲ್ ಕೋಡ್

(B) ಸಂದೇಶದ ವಿಷಯ ಮತ್ತು ಕಳುಹಿಸಿರುವವರನ್ನು ವಿಶಿಷ್ಟವಾಗಿ ಗುರುತಿಸಬಲ್ಲ ಒಂದು ಡಿಜಿಟಲ್ ಕೋಡ್

(C) ವಿಶಿಷ್ಟ ಗುರುತಿಗಾಗಿ ಕಂಪ್ಯೂಟರ್‌ಗೆ ಅಳವಡಿಸುವ ಒಂದು ಲಾಂಛನ

(D) ಒಂದು ವಿಶಿಷ್ಟ ಕಂಪ್ಯೂಟರ್‌ಗೆ ಲಾಗಿನ್ ಮಾಡಲು ಬಳಸುವ ಬಹುಸ್ತರದ ಗುಪ್ತಪದ

**54.** What is logically equivalent to “If today is Sunday, Matt cannot play hockey” ?

(A) Today is Sunday and Matt can play hockey

(B) If Matt plays hockey, then today is not Sunday

(C) Today is not Sunday and Matt cannot play hockey

(D) Today is not Sunday if and only if Matt plays hockey

**55.** SIM stands for

(A) Subscriber Integrated Module

(B) Standard Integrated Module

(C) Subscriber Identity Module

(D) Standard Identity Module

**56.** Light Emitting Diode (LED) converts

(A) Light energy into electrical energy

(B) Electrical energy into light energy

(C) Thermal energy into light energy

(D) Mechanical energy into electrical energy

**57.** An error in a computer program is

(A) Virus

(B) Bug

(C) Fatal error

(D) Power failure

**58.** Which of the following is a search engine ?

(A) Facebook

(B) YouTube

(C) MSN

(D) Windows

**59.** Encryption is

(A) Coding of messages to prevent unauthorised access

(B) Coding of computers to prevent unauthorised users

(C) Creating bar codes on computer peripherals

(D) Conversion of hard copy into soft copy

**60.** Digital signature means

(A) A digital code that measures the unique physical trait of an individual

(B) A digital code that uniquely identifies the content of the message and the sender

(C) A logo onto computer system for unique identification

(D) A multi-level password used to login to a unique computer

ಚಿತ್ತು ಬರಹಕ್ಕಾಗಿ ಸ್ಥಳ

**Space for Rough Work**